ದಿನಾಂಕ 09-01-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲು ಶ್ರೀ. ಹೆಚ್.ಎಲ್.ವಿ. ಆರೋಪಿ ಪರ ವಕೀಲರಿಂದಃ

ನಾನು 10 ನೇ ತರಗತಿಯ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಈ ಪ್ರಕರಣವನ್ನು ಹೊರತು ಪಡಿಸಿ ಚೆಕ್ಕುಗಳಿಗೆ ಸಂಬಂಧಪಟ್ಟ ಬೇರೆ ಯಾವುದೇ ಪ್ರಕರಣಗಳಲ್ಲಿ ನಾನು ಪಿರ್ಯಾದುದಾರನಾಗಿ ನಡೆಸುತ್ತಿರುವುದಿಲ್ಲ. ನಾನು ಹಲವಾರು ಬಾರಿ ಬ್ಯಾಂಕುಗಳಿಗೆ ಚಕ್ಕುಗಳನ್ನು ಜಮೆಗಾಗಿ ಸಲ್ಲಿಸಿರುತ್ತೇನೆ. ನಿಪಿ-2 ರ ದಾಖಲೆಯಲ್ಲಿ ನಿಪಿ-1 ರ ಚೆಕ್ ನಂ. ನಮೂದು ಮಾಡಿರುವುದಿಲ್ಲ ಎಂದರೆ ಸರಿ. ನನ್ನ ಬ್ಯಾಂಕಿಗೆ ಹಣವನ್ನು ನಗದು ರೂಪದಲ್ಲಿ ಕಟ್ಟಬೇಕಾದರೆ ನಿಪಿ-2 ರ ಚಲಾನ್ ರಂತೆ ಬರೆದು ಸಲ್ಲಿಸುತ್ತೇನೆ ಎಂದರೆ ಸರಿ. ನಿಪಿ-2 ರಲ್ಲಿ ನಮೂದಿಸಿರುವ ಆಕೌಂಟ್ ನಂಬರ್ ನನಗೆ ಸೇರರುವ ಆಕೌಂಟ್ ನಂಬರ್ ಆಗಿರುತ್ತದೆ ಎಂದರೆ ಸರಿ.

ನಿಪಿ-1 ರಲ್ಲಿ ಕಾಣಿಸುವ ಬರವಣಿಗೆಯು ನನ್ನದಾಗಿರುತ್ತದೆ ಎಂದರೆ ಸರಿಯಲ್ಲ. ನಿಪಿ-1 ರ ಚೆಕ್ ವಿಜಯ ಬಾಂಕ್ ಗೌರಿಬಿದನೂರು ಶಾಖೆಗೆ ಸೇರಿದ ಚೆಕ್ ಆಗಿರುವುದಿಲ್ಲ ಎಂದರೆ ಸರಿ. ದಿನಾಂಕ 12-11-2019 ಎಂದು ದಿನಾಂಕವನ್ನು ನಮೂದು ಮಾಡಿರುವ ಆರೋಪಿಗೆ ಸೇರಿದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ರ ಚೆಕ್ ಅನ್ನು ನಗದೀಕರಿಸಲು ನಿಮ್ಮ ಬ್ಯಾಂಕಿಗೆ ಸಲ್ಲಿಸಿರುವಿರಾ ಎಂಬ ಪ್ರಶ್ನೆಗೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಿಪಿ-3 ರ ಬ್ಯಾಂಕ್ ರಿಟರ್ನ್ ಮೆಮೊವಿನಲ್ಲಿ 12-11-2019 ರ ದಿನಾಂಕ ವನ್ನು ನಮೂದು ಮಾಡಿರುವ ಚಕ್ 'Funds Insufficient' ಎಂದು ಹಿಂತಿರುಗಿಸಲಾಗಿದೆ ಎಂದು ನಮೂದಾಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಿಪಿ-3 ರ ಬ್ಯಾಂಕ್ ರಿಟರ್ನ್ ಮೆಮೊ ದಿನಾಂಕ 12-12-2019 ರಂದು ನನಗೆ ನೀಡಿರುತ್ತಾರೆ ಎಂದು ನುಡಿಯುತ್ತಾರೆ.

ನಿಪಿ-1 ರ ಚೆಕ್ಕಿನಲ್ಲಿ ನಮೂದು ಮಾಡಿರುವ 11-12-2019 ಎಂಬ ದಿನಾಂಕ ಹಾಗೂ ನಿಪಿ-3 ರ ಬ್ಯಾಂಕ್ ರಿಟರ್ನ್ ಮೆಮೊವಿನಲ್ಲಿ ಚೆಕ್ ಡೇಟ್ 12-11-2019 ಎಂಬ ದಿನಾಂಕ ಗಳ ಮಧ್ಯೆ ವ್ಯಾತ್ಯಾವಿದೆ ಎಂದರೆ ಸರಿ. ನಿಪಿ-3 ರ ಬ್ಯಾಂಕ್ ರಿಟರ್ನ್ ಮೆಮೊವನ್ನು ವಿಜಯಾ ಬ್ಯಾಂಕ್ ಗೌರಿಬಿದನೂರು ಶಾಖೆ ರವರು ನನ್ನ ಬ್ಯಾಂಕಿಗೆ ಕಳುಹಿಸಿರುವ ರಿಟರ್ನ್ ಮೆಮೊ ಆಗಿರುವುದಿಲ್ಲ ಎಂದರೆ ಸರಿ.

ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದ ಎರೆಡನೇ ಪ್ಯಾರಾ ದಲ್ಲಿ ಬರೆದಿರುವ ಅಂಶಗಳೆಲ್ಲವೂ ಸತ್ತವಾಗಿರುತ್ತದೆ. ನಿಪಿ-7 ಮತ್ತು 8 ರಲ್ಲಿ ನಮೂದಿಸಿರುವ ವಿಳಾಸದಲ್ಲಿ ಲಕ್ಷ್ಮೀಪತಿ ಎಂಬ ಹೆಸರಿನ ವ್ಯಕ್ತಿಯು ವಾಸವಿರುವುದಿಲ್ಲ ಎಂದು ಸದರಿ ಪೋಸ್ಟಲ್ ಕವರ್ಗಳನ್ನು ಹಿಂತಿರುಗಿಸಲಾಗಿದೆ ಎಂದರೆ ಸರಿ. ಆರೋಪಿಯ ಸರಿಯಾದ ವಿಳಾಸವನ್ನು ತಿಳಿದುಕೊಂಡು ತಿಳುವಳಿಕೆ ಪತ್ರವನ್ನು ಕಳುಹಿಸಿರುವಿರಾ ಎಂಬ ಪ್ರಶ್ನೆಗೆ ಸಾಕ್ಷಿ ಆರೋಪಿಯು ಮೊದಲಿನಿಂದ ಇದ್ದ ವಿಳಾಸಕ್ಕೆ ತಿಳುವಳಿಕೆ ಪತ್ರವನು ಕಳುಹಿಸಿರುತ್ತೇನೆ ಎಂದು ನುಡಿಯುತ್ತಾರೆ. ಆರೋಪಿಯು ನಿಪಿ-4, 7 ಮತ್ತು 8 ರಲ್ಲಿ ನಮೂದಿಸಿರುವ ವಿಳಾಸದಲ್ಲಿ ವಾಸವಿದ್ದರು ಎಂದು ತೋರಿಸಲು ನ್ಯಾ ಕ್ಕೆ ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ. ನಿಪಿ-4, 7 ಮತ್ತು 8 ಹಾಗೂ ಖಾಸಗಿ ದೂರಿನಲ್ಲಿ ನಮೂದಿಸಲಾಗಿರುವ ವಿಳಾಸದಲ್ಲಿ ಆರೋಪಿಯು ಎಂದಿಗೂ ಸಹ ವಾಸವಿರಲಿಲ್ಲ ಎಂದರೆ ಸರಿಯಲ್ಲ.

ನಾನು ಚೀಟಿ ವ್ಯವಹಾರವನ್ನು ಮಾಡುತೇನೆ ಎಂದರ ಸರಿಯಲ್ಲ. ಸಾಕ್ಷಿಗೆ ಒಂದು ಚಿಕ್ಕ ನೋಟು ಪುಸ್ತಕದ ಮೊದಲನೇ, ಎರಡನೇ, ಮೂರನೇ ಮತ್ತು ನಾಲ್ಕನೇ ಪುಟದಲ್ಲಿರುವ ಅಕ್ಷರಗಳು ಹಾಗೂ ಸಹಿಗಳನ್ನು ತೋರಿಸಲಾಯಿತು ಆದರೆ ಸಾಕ್ಷಿಯು ಅವುಗಳನ್ನು ಅವು ತನ್ನ ಸಹಿ ಹಾಗೂ ಬರವಣಿಗೆ ಅಲ್ಲ ಎಂದು ನುಡಿಯುತ್ತಾರೆ. ಆರೋಪಿಯು ನನ್ನ ಬಳಿ ಯಾವುದೇ ಸಾಲವನ್ನು ಪಡೆದುಕೊಂಡಿಲ್ಲ ಹಾಗೂ ಆರೋಪಿಯು ನಿಪಿ-1 ರ ಚೆಕ್ ಅನ್ನು ಸಾಲ ತೀರಿಸಲು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಅವರ ಗೆಳೆಯನಿಗೆ ಚೆಕ್ ಅನ್ನು ನೀಡಿದ್ದು ಸದರಿ ಚೆಕ್ ಅನ್ನು ದುರುಪಯೋ ಪಡಿಸಿಕೊಂಡು ನಾನು ಈ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-1 ರ ಚೆಕ್ ಅನ್ನು ನಗದೀಕರಿಸಲು ನಾನು ಬ್ಯಾಂಕಿಗೆ ಹಾಜರುಪಡಿಸಿರುವುದಿಲ್ಲ ಎಂದೆರ ಸರಿಯಲ್ಲ. ನಿಪಿ-8 ರ ಲಕೋಟೆಯ ಮೇಲೆ ತಿರಸ್ಕಾರ ಮಾಡಲಾಗಿದೆ ಎಂಬ ವಿಚಾರವನ್ನು ನಮೂದು ಮಾಡಿರುವುದಿಲ್ಲ ಎಂದರೆ ಸಾಕ್ಷಿ ಆರೋಪಿಗೆ ಎರಡು ಬಾರಿ ತಿಳುವಳಿಕೆ ಪತ್ರವನ್ನು ಕಳುಹಿಸಿದೆನು ಹಾಗೂ ಎರಡು ಬಾರಿ ತಿರಸ್ಕಾರ ಮಾಡಿದರು ಎಂದು ನುಡಿಯುತ್ತಾರೆ. ನಾನು ಕೊರಿಯರ್ ರವರೊಂದಿಗೆ ಶಾಮೀಲಾಗಿ ನಿಪಿ-8 ರ ದಾಖಲೆಯನ್ನು ಸೃಷ್ಠಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯಿಂದ ಹಣವನ್ನು ಅಕ್ರಮವಾಗಿ ವಸೂಲಿ ಮಾಡುವ ಉದ್ದೇಶದಿಂದ ಈ ಸುಳ್ಳು ಪ್ರಕರಣವನ್ನು ಹೂಡಿ ನ್ಯಾ ಮುಂದೆ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆರೋಪಿಗೆ ಯಾವುದೇ ಹಣವನ್ನು ನೀಡಿರುವುದಿಲ್ಲ ಹಾಗೂ ಆರೋಪಿಯು ನನಗೆ ಯಾವುದೇ ಚೆಕ್ ಅನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ.

**(ಮರುವಿಚಾರಣೆ ಇರುವುದಿಲ್ಲ.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ/-
ಪ್ರ.ಸಿ.ನ್ಯಾ ಮತ್ತು ಜೆಎಂಎಫ್‌ಸಿ,
ಗೌರಿಬಿದನೂರು